# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | : 696(734) |
| ಮಾನ್ಯ ಸದಸ್ಯರ ಹೆಸರು | : ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ) |
| ಉತ್ತರಿಸುವ ಸಚಿವರು | :ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು |
| ಉತ್ತರಿಸಬೇಕಾದ ದಿನಾಂಕ | :16.12.2024. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸರ್ಕಾರಿ ಶಾಲೆಗಳ ಅಭಿವೃದ್ಧಿ, ಸಬಲೀಕರಣಕ್ಕಾಗಿ ಈ ಹಿಂದೆ ಸರ್ಕಾರ ಸಮಿತಿ ರಚಿಸಿದ್ದು, ನಿಜವೇ; ನಿಜವಿದ್ದಲ್ಲಿ, ಸದರಿ ಸಮಿತಿಯು ತನ್ನ ವರದಿ ನೀಡಿದೆಯೇ; ಯಾವ ಕಾರಣಕ್ಕಾಗಿ ಸಮಿತಿಯನ್ನು ರಚಿಸಲಾಗಿದೆ; ಪ್ರಸ್ತುತ ಸದರಿ ಸಮಿತಿಯು ಕಾರ್ಯನಿರ್ವಹಿಸುತ್ತಿದೆಯೇ; (ಸಂಪೂರ್ಣ ಮಾಹಿತಿ ನೀಡುವುದು). | ಹೌದು<br><br>ಸರ್ಕಾರಿ ಶಾಲೆಗಳಲ್ಲಿ ಗುಣಾತ್ಮಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ಉತ್ತಮ ಕಲಿಕಾ ವಾತಾವರಣವನ್ನು ಸೃಷ್ಟಿಸಿ ಶಾಲೆಗಳಲ್ಲಿ ಕಲಿಕೆಯನ್ನು ಕೇಂದ್ರ ಬಿಂದುವನ್ನಾಗಿಸಲು ಸಾಧ್ಯವಾಗಬಹುದಾದ ರೀತಿಯಲ್ಲಿ ಶಿಕ್ಷಣ ವ್ಯವಸ್ಥೆಯನ್ನು ಪುನರ್ ರಚಿಸಲು ಹಾಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಉದ್ದೇಶವನ್ನು ಸಫಲ ಮಾಡಲು ಸರ್ಕಾರಿ ಶಾಲೆಗಳ ಅಭಿವೃದ್ಧಿ ಮತ್ತು ಸಬಲೀಕರಣಕ್ಕಾಗಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷರಾದ ಡಾ.ಎಲ್. ಹನುಮಂತಯ್ಯರವರ ನೇತೃತ್ವದಲ್ಲಿ ಸಮಿತಿಯನ್ನು ರಚಿಸಲಾಗಿದ್ದು, ಸದರಿ ಸಮಿತಿಯು ವರದಿಯನ್ನು ಸಲ್ಲಿಸಿರುತ್ತದೆ |
| ಆ) | ರಾಜ್ಯದಲ್ಲಿನ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಶಿಕ್ಷಕರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರದ ಕ್ರಮಗಳೇನು; (ವಿವರಿಸಿ) | ಬಂದಿದೆ.<br><br>1. 2022ರಲ್ಲಿ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರ 15,000 ಹುದ್ದೆಗಳ ನೇಮಕಾತಿಗೆ ಅಧಿಸೂಚನೆ ಹೊರಡಿಸಿದ್ದು, ಅದರಲ್ಲಿ ಅರ್ಹತೆ ಪಡೆದಿರುವ 13352 ಅಭ್ಯರ್ಥಿಗಳ ಪೈಕಿ ಈವರೆಗೆ 12521 ಅಭ್ಯರ್ಥಿಗಳಿಗೆ ನೇಮಾಕಾತಿ ಆದೇಶ ನೀಡಲಾಗಿರುತ್ತದೆ. ಉಳಿದ ಅಭ್ಯರ್ಥಿಗಳಿಗೆ ಸಂಬಂಧಿಸಿದಂತೆ ಪ್ರಕರಣವು ಪ್ರಸ್ತುತ ಸರ್ವೋಚ್ಚ ನ್ಯಾಯಾಲಯದಲ್ಲಿ ಇತ್ಯರ್ಥಕ್ಕೆ ಬಾಕಿಯಿರುತ್ತದೆ.<br><br>2. ಸರ್ಕಾರದ ಆದೇಶ ಸಂಖ್ಯೆ: ಇಪಿ 230 ಪಿಬಿಎಸ್ 2024 ದಿನಾಂಕ:07.10.2024 ರನ್ವಯ ಕಲ್ಯಾಣ ಕರ್ನಾಟಕ ಪ್ರದೇಶದ 07 ಜಿಲ್ಲೆಗಳಲ್ಲಿ ಖಾಲಿಯಿರುವ ಪ್ರಾಥಮಿಕ ಶಾಲೆಗಳ 4882 ಹಾಗೂ ಪ್ರೌಢಶಾಲೆಗಳ 385 ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿ ನೀಡಲಾಗಿರುತ್ತದೆ.<br><br>3. ಮುಂದುವರೆದು, ಸುತ್ತೋಲೆ ಸಂಖ್ಯೆ: ಸಿಆಸುಇ 388 ಸೆನೆನಿ 2024, ದಿನಾಂಕ: 25.11.2024 ರಲ್ಲಿ ದಿನಾಂಕ:28.10.2024 ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ತೆಗೆದುಕೊಂಡ ನಿರ್ಣಯದಂತೆ ರಾಜ್ಯ ಸಿವಿಲ್ ಸೇವೆಗಳಲ್ಲಿನ ಮೀಸಲಾತಿ ಅನ್ವಯವಾಗುವ ವೃಂದಗಳಲ್ಲಿನ ಹುದ್ದೆಗಳಿಗೆ ನೇರ ನೇಮಕಾತಿ ಮಾಡಲು |

| | | |
|---|---|---|
| | | ಹೊಸದಾಗಿ ಯಾವುದೇ ಅಧಿಸೂಚನೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಮುಂದಿನ ಆದೇಶದವರೆಗೂ ಹೊರಡಿಸಬಾರದೆಂದು ಸೂಚಿಸಲಾಗಿರುತ್ತದೆ.<br><br>4. ಪ್ರಸ್ತುತ, ರಾಜ್ಯದ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಖಾಲಿ ಇರುವ ಬೋಧಕ ಹುದ್ದೆಗಳಿಗೆ ಎದುರಾಗಿ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ತಾತ್ಕಾಲಿಕವಾಗಿ ಖಾಯಂ ಹುದ್ದೆ ಭರ್ತಿ ಆಗುವವರೆಗೆ ಅಥವಾ ಶೈಕ್ಷಣಿಕ ವರ್ಷದ ಅಂತ್ಯದವರೆಗೆ ಪ್ರಾಥಮಿಕ ಶಾಲೆಗಳಿಗೆ 35000 ಮತ್ತು ಪ್ರೌಢಶಾಲೆಗಳಿಗೆ 8968 ರಂತೆ ಒಟ್ಟಾರೆ 43968 ಅತಿಥಿ ಶಿಕ್ಷಕರುಗಳನ್ನು ನೇಮಕ ಮಾಡಿಕೊಳ್ಳಲಾಗಿದೆ. |
| ಇ) | ರಾಜ್ಯದಲ್ಲಿ ಎಷ್ಟು ಶಾಲೆಗಳಲ್ಲಿ ಎಷ್ಟು ಶಿಕ್ಷಕರ ಕೊರತೆ ಇದೆ; (ವಿಷಯವಾರು ಮತ್ತು ವಲಯವಾರು ಸಂಪೂರ್ಣ ಮಾಹಿತಿ ನೀಡುವುದು) | ರಾಜ್ಯದ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ 50067 ಹಾಗೂ ಸರ್ಕಾರಿ ಪ್ರೌಢಶಾಲೆಗಳಲ್ಲಿ 11796 ಹುದ್ದೆಗಳು ಖಾಲಿಯಿರುತ್ತವೆ. (ವಿಷಯವಾರು ಹಾಗೂ ಜಿಲ್ಲಾವಾರು ವಿವರಗಳನ್ನು **ಅನುಬಂಧ-1ರಲ್ಲಿರಿಸಿದೆ)** |
| ಈ) | ಪ್ರತಿ ವರ್ಷ ಸರ್ಕಾರಿ ಶಾಲೆಗಳಲ್ಲಿ ಪ್ರವೇಶ ಪಡೆಯುವವರ ಸಂಖ್ಯೆ ಕುಸಿತವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಬಗ್ಗೆ ಕೈಗೊಂಡ ಕ್ರಮಗಳೇನು; | ಬಂದಿದೆ<br><br>**ದಾಖಲಾತಿ ಹೆಚ್ಚಳಕ್ಕೆ ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತದೆ:-**<br>1. ವಿದ್ಯಾರ್ಥಿಗಳಿಗೆ ಪಠ್ಯ ಪುಸ್ತಕ, ಸಮವಸ್ತ್ರ, ಶೂ, ಸಾಕ್ಸ್, ಮಧ್ಯಾಹ್ನದ ಉಪಹಾರ, ಕ್ಷೀರಭಾಗ್ಯ ಉಚಿತವಾಗಿ ನೀಡಲಾಗುತ್ತದೆ.<br>2. ಶಾಲೆಗಳ ಮೂಲಭೂತ ಸೌಕರ್ಯ ಅಭಿವೃದ್ಧಿಪಡಿಸಲಾಗಿದೆ.<br>3. ಗುಣಾತ್ಮಕ ಶಿಕ್ಷಣಕ್ಕಾಗಿ ನಿಯಮಿತವಾಗಿ ಶಿಕ್ಷಕರಿಗೆ ತರಬೇತಿ ಆಯೋಜಿಸಲಾಗುತ್ತದೆ.<br>4. ಸರ್ಕಾರಿ ಶಾಲೆಗಳಲ್ಲಿ ತಂತ್ರಜ್ಞಾನ ಆಧಾರಿತ ಶಿಕ್ಷಣವನ್ನು ಪ್ರೋತ್ಸಾಹಿಸಲಾಗುತ್ತಿದೆ.<br>5. 74 ಶೈಕ್ಷಣಿಕವಾಗಿ ಹಿಂದುಳಿದ ತಾಲ್ಲೂಕುಗಳಲ್ಲಿ 6 ರಿಂದ 10ನೇ ತರಗತಿಯವರೆಗೆ ಇಂಗ್ಲೀಷ್ ಮಾಧ್ಯಮದಲ್ಲಿ ಕೇಂದ್ರಿಯ ವಿದ್ಯಾಲಯ ಮಾದರಿಯಲ್ಲಿ ಆದರ್ಶ ವಿದ್ಯಾಲಯಗಳನ್ನು (ಮಾದರಿ ಶಾಲೆಗಳು) ಪ್ರಾರಂಭಿಸಲಾಗಿದೆ.<br>6. ವಿಶೇಷ ಚೇತನ ಮಕ್ಕಳಿಗೆ ವೈದ್ಯಕೀಯ ಶಿಬಿರಗಳನ್ನು ಏರ್ಪಡಿಸಲಾಗುತ್ತಿದೆ ಮತ್ತು ನ್ಯೂನ್ಯತೆಗನುಗುಣವಾಗಿ ಸಾಧನ ಸಲಕರಣೆಗಳನ್ನು ನೀಡಲಾಗುತ್ತಿದೆ.<br>7. ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಪ್ರೋತ್ಸಾಹ ನೀಡಲು 86 ವಸತಿ ನಿಲಯಗಳನ್ನು ಪ್ರಾರಂಭಿಸಲಾಗಿದೆ ಸದರಿ ವಸತಿ ನಿಲಯಗಳಲ್ಲಿ ಯೋಗ, ಕರಾಟೆ, ಇತ್ಯಾದಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. |

| | | |
|---|---|---|
| | | 8. ಶಿಕ್ಷಣದಿಂದ ವಂಚಿತರಾದ ವಿದ್ಯಾರ್ಥಿಗಳನ್ನು ಗುರುತಿಸಿ, ಸಂಬಂಧಿಸಿದ ಪೋಷಕರು ಮತ್ತು ವಿದ್ಯಾರ್ಥಿಗಳನ್ನು ಮನವೊಲಿಸಿ, ಪುನಃ ಶಾಲೆಗೆ ದಾಖಲಿಸಲಾಗುತ್ತಿದೆ. ಈ ಕಾರ್ಯವನ್ನು ಎಸ್ ಡಿಎಮ್‌ಸಿ, ಸ್ಥಳೀಯ ಸಂಸ್ಥೆಗಳು ಹಾಗೂ ಸಮುದಾಯದ ಸಹಕಾರದೊಂದಿಗೆ ನಿರ್ವಹಿಸಲಾಗುತ್ತಿದೆ.<br>9. ಎಸ್.ಎ.ಟಿ.ಎಸ್ ವ್ಯವಸ್ಥೆ ಮೂಲಕ ವಿದ್ಯಾರ್ಥಿಗಳ ಸಾಧನೆಯನ್ನು ಜಾಡುಹಿಡಿಯಲಾಗುತ್ತಿದೆ.<br>10. ಶಾಲಾ ದತ್ತು ಯೋಜನೆ (ಸಿ.ಎಸ್.ಆರ್) ಮೂಲಕ ಶಿಕ್ಷಣದ ಗುಣಮಟ್ಟವನ್ನು ಉತ್ತಮ ಪಡಿಸಲಾಗುತ್ತಿದೆ.<br>11. 6 ಮತ್ತು 8ನೇ ತರಗತಿಗೆ 12521 ಜಿ.ಪಿ.ಟಿ ಶಿಕ್ಷಕರ ನೇಮಕಾತಿ ಮಾಡಿಕೊಳ್ಳುವ ಮೂಲಕ ಗುಣಾತ್ಮಕ ಶಿಕ್ಷಣಕ್ಕಾಗಿ ಕ್ರಮವಹಿಸಲಾಗಿದೆ<br>12. 2021-22 & 2022-23 ರಲ್ಲಿ ಕಲಿಕಾ ಚೇತರಿಕೆ ಕಾರ್ಯಕ್ರಮವನ್ನು ಅನಷ್ಠಾನಗೊಳಿಸಿ ಶಿಕ್ಷಕರಿಗೆ ಕೋವಿಡ್ ಸಮಯದಲ್ಲಿ ತರಬೇತಿ ನೀಡಿ ಶಾಲೆಯಲ್ಲಿ ಗುಣಮಟ್ಟದ ಶಿಕ್ಷಣ ನೀಡಲು ಒತ್ತು ನೀಡಲಾಗಿದೆ.<br>13. 2024-25ನೇ ಸಾಲಿನಲ್ಲಿ ರಾಜ್ಯಾದ್ಯಂತ ಖಾಲಿ ಇರುವ ಹುದ್ದೆಗಳಿಗೆದುರಾಗಿ ತಾತ್ಕಾಲಿಕವಾಗಿ ಪ್ರಾಥಮಿಕ ಶಾಲೆಗಳಿಗೆ 35000 ಅತಿಥಿ ಶಿಕ್ಷಕರನ್ನು ಮತ್ತು ಪ್ರೌಢಶಾಲೆಗಳಿಗೆ 8968 ಅತಿಥಿ ಶಿಕ್ಷರನ್ನು ನೇಮಿಸಿಕೊಂಡು ಮಕ್ಕಳ ಬೋಧನೆಗೆ ತೊಂದರೆಯಾಗದಂತೆ ನೇಮಿಸಿಕೊಂಡು ಮಕ್ಕಳ ಕಲಿಕೆಗೆ ಪ್ರೋತ್ಸಾಹಿಸಲಾಗಿರುತ್ತದೆ.<br>14. ಪ್ರಸ್ತುತ 2024-25ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಪ್ರಸ್ತುತ ನಡೆಯುತ್ತಿರುವ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗಳ ಪೈಕಿ 55 ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗಳನ್ನು ಹಿರಿಯ ಪ್ರಾಥಮಿಕ ಶಾಲೆಗಳನ್ನಾಗಿ ಉನ್ನತೀಕರಿಸಲಾಗಿರುತ್ತದೆ ಹಾಗೂ 1 ರಿಂದ 7ನೇ ತರಗತಿ ನಡೆಯುತ್ತಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳ ಪೈಕಿ 41 ಶಾಲೆಗಳನ್ನು 8ನೇ ತರಗತಿಗೆ ಉನ್ನತೀಕರಿಸಲಾಗಿರುತ್ತದೆ.<br>15. ಸರ್ಕಾರಿ ಶಾಲೆಗಳ ಬಲವರ್ಧನೆಗಾಗಿ 2024-25ನೇ ಸಾಲಿನಲ್ಲಿ ಪ್ರಸ್ತುತ ನಡೆಯುತ್ತಿರುವ ಕನ್ನಡ/ಇತರೆ ಮಾಧ್ಯಮದ ಜೊತೆ ಹೆಚ್ಚುವರಿಯಾಗಿ 1419 ಆಂಗ್ಲ (ದ್ವಿಭಾಷಾ) ಮಾಧ್ಯಮ ಶಾಲೆಗಳನ್ನು ಪ್ರಾರಂಭಿಸಲಾಗಿರುತ್ತದೆ.<br>16. ರಾಜ್ಯದ ಸರ್ಕಾರಿ & ಅನುದಾನಿತ ಶಾಲೆಗಳಿಂದ ಸಾಧನೆ ಮಾಡಿದ ಶಿಕ್ಷಕರುಗಳಿಗೆ ರಾಜ್ಯ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ಪ್ರಧಾನ ಮಾಡಿ ಸನ್ಮಾನಿಸಲಾಗುತ್ತಿದೆ. ಇದರಿಂದಾಗಿ ಶಿಕ್ಷಕರು ತಮ್ಮ |

| | | |
|---|---|---|
| | | ಬೋಧನಾ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುವುದರೊಂದಿಗೆ ಪರಿಣಾಮಕಾರಿ ಪಾಠ ಸಹಕಾರಿಯಾಗುವುದು.<br>17. ಪ್ರತಿ ವರ್ಷ ರಾಜ್ಯದಲ್ಲಿ 8 ಉತ್ತಮ ಶಾಲೆಯನ್ನು ಗುರ್ತಿಸಿ ಸ್ವಾಭಿಮಾನಿ ಶಾಲೆಗಳಾಗಿ ಆಯ್ಕೆ ಮಾಡಿ ಸರ್ಕಾರದಿಂದ ಅನುದಾನವನ್ನು ನೀಡಲಾಗುತ್ತಿದೆ.<br>18. ರಾಜ್ಯದ ಎಲ್ಲಾ ಶಾಲೆಗಳಿಗೆ ಸಿ.ಆರ್.ಪಿ ಬಿ.ಆರ್.ಪಿ. ಬಿ.ಆರ್.ಸಿ ಡಯಟ್ ಉಪನ್ಯಾಸಕರು ವಿಷಯ ಪರಿವೀಕ್ಷಕರು ಹಾಗೂ ನೋಡಲ್ ಅಧಿಕಾರಿಗಳು ಪ್ರತಿ ಮಾಹೆ ಸದರಿ ಶಾಲೆಗಳ ಭೇಟಿ ನೀಡುವುದರೊಂದಿಗೆ ಅಗತ್ಯ ಸಲಹೆ, ಸೂಚನೆ, ಮಾರ್ಗದರ್ಶನ ನೀಡಿ ಅನುಪಾಲನೆ ಮಾಡಲು ಸೂಚಿಸಲಾಗಿರುತ್ತದೆ<br>19. ಪಿ.ಆರ್.ಡಿ.ಎಫ್ ಯೋಜನೆಯಡಿ ಗ್ರಾಮಸಭೆ ನಡೆಸುವ ಮೂಲಕ ಮಕ್ಕಳ ದಾಖಲಾತಿ ಆಂದೋಲವನ್ನು ಹಮ್ಮಿಕೊಂಡು ಮಕ್ಕಳ ದಾಖಲಾತಿ ಹೆಚ್ಚಿಸಲು ಕ್ರಮವಹಿಸುವುದು.<br>20. ಎನ್.ಟಿ.ಎಸ್‌ಇ / ಎನ್.ಎಂ.ಎಂ.ಎಸ್ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಡಿ.ಎಸ್.ಇ.ಆರ್.ಟಿ & ಎಂ.ಹೆಚ್. ಆರ್.ಡಿ ಮೂಲಕ ವಿದ್ಯಾರ್ಥಿ ವೇತನ ನೀಡಿ ಪ್ರೋತ್ಸಾಹಿಸಲಾಗುತ್ತಿದೆ.<br>ಶಾಲೆ ಬಿಟ್ಟ ಮಕ್ಕಳನ್ನು ಮರಳಿ ಶಾಲೆಗೆ ಕರೆತರಲು ಪ್ರತಿ ಬ್ಲಾಕ್ ನಲ್ಲಿ ನೋಡಲ್ ಅಧಿಕಾರಿಗಳನ್ನು ನೇಮಿಸಿ ಪೋಷಕರ & ಮಕ್ಕಳ ಮನವೊಲಿಸಿ ಶಾಲೆಗೆ ಕರೆತರಲು ಕ್ರಮವಹಿಸಲಾಗುತ್ತಿದೆ. |
| ಉ) | ರಾಜ್ಯದಲ್ಲಿ ಸುಮಾರು ಶಾಲೆಗಳಲ್ಲಿ ಶೂನ್ಯ ಪ್ರವೇಶಾತಿ ಇರುವುದು ನಿಜವೇ? (ಶಾಲೆವಾರು ಮತ್ತು ತಾಲ್ಲೂಕುವಾರು ಮಾಹಿತಿ ನೀಡುವುದು) | ಹೌದು<br>ಶೂನ್ಯ ಪ್ರವೇಶಾತಿ ಇರುವ ಶಾಲೆಗಳ ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ-2**ರಲ್ಲಿರಿಸಿದೆ. |

**ಇಪಿ 127 ಪಿಎಂಎ 2024**

**(ಎಸ್. ಮಧು ಬಂಗಾರಪ್ಪ)**
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

"ಅನುಬಂಧ-1

## ರಾಜ್ಯದ ಸರ್ಕಾರಿ ಪ್ರೌಢಶಾಲೆಗಳಲ್ಲಿ ಶಿಕ್ಷಕರ ಮಂಜೂರು, ಕಾರ್ಯನಿರತ, ಹಾಗೂ ಖಾಲಿ ಹುದ್ದೆಗಳ ಜಿಲ್ಲಾವಾರು ಮಾಹಿತಿ

| DISTRICT NAME | PCM | | | CBZ | | | ARTS | | | ENG | | | HINDI | | | LAN | | | PET | | | SPL | | | TOTAL | | |
|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | SAN | WORK | VACANT | SAN | WORK | VACANT | SAN | WORK | VACANT | SAN | WORK | VACANT | SAN | WORK | VACANT | SAN | WORK | VACANT | SAN | WORK | VACANT | SAN | WORK | VACANT | SAN | WORK | VACANT |
| BAGALKOT | 321 | 307 | 14 | 215 | 167 | 48 | 270 | 197 | 73 | 225 | 178 | 47 | 195 | 133 | 62 | 258 | 188 | 70 | 207 | 188 | 19 | 109 | 96 | 13 | 1800 | 1454 | 346 |
| BALLARI | 207 | 191 | 16 | 145 | 84 | 61 | 176 | 68 | 108 | 153 | 57 | 96 | 137 | 73 | 64 | 170 | 76 | 94 | 141 | 45 | 96 | 41 | 29 | 12 | 1170 | 623 | 547 |
| BELAGAVI | 350 | 323 | 27 | 228 | 187 | 41 | 301 | 241 | 60 | 231 | 198 | 33 | 198 | 163 | 35 | 283 | 192 | 91 | 212 | 187 | 25 | 116 | 115 | 1 | 1919 | 1606 | 313 |
| BELAGAVI CHIKKODI | 232 | 203 | 29 | 155 | 75 | 80 | 189 | 30 | 159 | 158 | 72 | 86 | 140 | 112 | 28 | 182 | 51 | 131 | 148 | 97 | 51 | 83 | 83 | 0 | 1287 | 723 | 564 |
| BENGALURU RURAL | 119 | 119 | 0 | 76 | 71 | 5 | 100 | 44 | 56 | 81 | 47 | 34 | 74 | 50 | 24 | 95 | 50 | 45 | 74 | 35 | 39 | 38 | 34 | 4 | 657 | 450 | 207 |
| BENGALURU U NORTH | 125 | 123 | 2 | 74 | 72 | 2 | 106 | 82 | 24 | 82 | 72 | 10 | 69 | 66 | 3 | 108 | 100 | 8 | 71 | 62 | 9 | 46 | 46 | 0 | 681 | 623 | 58 |
| BENGALURU U SOUTH | 185 | 183 | 2 | 109 | 109 | 0 | 163 | 113 | 50 | 120 | 99 | 21 | 102 | 96 | 6 | 147 | 100 | 47 | 102 | 76 | 26 | 64 | 61 | 3 | 992 | 837 | 155 |
| BIDAR | 240 | 230 | 10 | 212 | 155 | 57 | 216 | 146 | 70 | 181 | 105 | 76 | 141 | 123 | 18 | 259 | 148 | 111 | 175 | 106 | 69 | 96 | 90 | 6 | 1520 | 1103 | 417 |
| CHAMARAJANAGARA | 127 | 125 | 2 | 92 | 62 | 30 | 107 | 72 | 35 | 98 | 56 | 42 | 91 | 49 | 42 | 103 | 73 | 30 | 91 | 59 | 32 | 21 | 11 | 10 | 730 | 507 | 223 |
| CHIKKABALLAPURA | 159 | 151 | 8 | 122 | 79 | 43 | 139 | 73 | 66 | 127 | 68 | 59 | 119 | 88 | 31 | 142 | 85 | 57 | 119 | 56 | 63 | 43 | 36 | 7 | 970 | 636 | 334 |
| CHIKKAMANGALURU | 181 | 177 | 4 | 127 | 100 | 27 | 167 | 98 | 69 | 131 | 110 | 21 | 125 | 101 | 24 | 148 | 103 | 45 | 121 | 78 | 43 | 51 | 46 | 5 | 1051 | 813 | 238 |
| CHITRADURGA | 173 | 168 | 5 | 127 | 115 | 12 | 149 | 118 | 31 | 130 | 115 | 15 | 122 | 105 | 17 | 148 | 109 | 39 | 125 | 91 | 34 | 57 | 51 | 6 | 1031 | 872 | 159 |
| DAKSHINA KANNADA | 237 | 226 | 11 | 183 | 177 | 6 | 208 | 151 | 57 | 187 | 120 | 67 | 181 | 93 | 88 | 193 | 111 | 82 | 176 | 133 | 43 | 45 | 40 | 5 | 1410 | 1051 | 359 |
| DAVANAGERE | 225 | 215 | 10 | 154 | 154 | 0 | 187 | 160 | 27 | 156 | 131 | 25 | 141 | 132 | 9 | 195 | 153 | 42 | 145 | 106 | 39 | 82 | 72 | 10 | 1285 | 1123 | 162 |
| DHARWAD | 174 | 172 | 2 | 120 | 119 | 1 | 145 | 109 | 36 | 126 | 99 | 27 | 110 | 92 | 18 | 141 | 90 | 51 | 116 | 93 | 23 | 74 | 68 | 6 | 1006 | 842 | 164 |
| GADAG | 162 | 156 | 6 | 123 | 91 | 32 | 141 | 87 | 54 | 125 | 81 | 44 | 116 | 70 | 46 | 134 | 80 | 54 | 119 | 76 | 43 | 55 | 52 | 3 | 975 | 693 | 282 |
| HASSAN | 321 | 314 | 7 | 248 | 183 | 65 | 306 | 171 | 135 | 250 | 179 | 71 | 247 | 175 | 72 | 276 | 188 | 88 | 247 | 112 | 135 | 104 | 94 | 10 | 1999 | 1416 | 583 |
| HAVERI | 205 | 199 | 6 | 160 | 121 | 39 | 185 | 130 | 55 | 163 | 129 | 34 | 134 | 75 | 59 | 193 | 123 | 70 | 159 | 104 | 55 | 71 | 62 | 9 | 1270 | 943 | 327 |
| KALBURGI | 410 | 375 | 35 | 323 | 238 | 85 | 358 | 260 | 98 | 321 | 227 | 94 | 286 | 242 | 44 | 363 | 260 | 103 | 311 | 222 | 89 | 135 | 117 | 18 | 2507 | 1941 | 566 |
| KODAGU | 60 | 56 | 4 | 48 | 26 | 22 | 56 | 35 | 21 | 50 | 36 | 14 | 48 | 22 | 26 | 51 | 27 | 24 | 48 | 35 | 13 | 9 | 5 | 4 | 370 | 242 | 128 |
| KOLAR | 201 | 196 | 5 | 141 | 100 | 41 | 173 | 95 | 78 | 149 | 98 | 51 | 138 | 77 | 61 | 180 | 95 | 85 | 137 | 60 | 77 | 47 | 34 | 13 | 1166 | 755 | 411 |
| KOPPAL | 309 | 269 | 40 | 205 | 143 | 62 | 260 | 165 | 95 | 214 | 124 | 90 | 196 | 115 | 81 | 240 | 131 | 109 | 200 | 120 | 80 | 64 | 56 | 8 | 1688 | 1123 | 565 |
| MANDYA | 271 | 266 | 5 | 227 | 140 | 87 | 252 | 173 | 79 | 231 | 157 | 74 | 227 | 142 | 85 | 250 | 161 | 89 | 221 | 121 | 100 | 104 | 90 | 14 | 1783 | 1250 | 533 |
| MYSURU | 356 | 344 | 12 | 253 | 216 | 37 | 310 | 238 | 72 | 263 | 195 | 68 | 252 | 196 | 56 | 291 | 229 | 62 | 246 | 211 | 35 | 105 | 98 | 7 | 2076 | 1727 | 349 |
| RAICHUR | 407 | 298 | 109 | 270 | 132 | 138 | 336 | 154 | 182 | 287 | 134 | 153 | 255 | 110 | 145 | 318 | 168 | 150 | 252 | 114 | 138 | 114 | 89 | 25 | 2239 | 1199 | 1040 |
| RAMANAGARA | 144 | 139 | 5 | 111 | 86 | 25 | 133 | 67 | 66 | 116 | 81 | 35 | 106 | 65 | 41 | 135 | 67 | 68 | 110 | 56 | 54 | 33 | 26 | 7 | 888 | 587 | 301 |
| SHIVAMOGGA | 268 | 262 | 6 | 187 | 178 | 9 | 239 | 197 | 42 | 195 | 143 | 52 | 165 | 135 | 30 | 238 | 194 | 44 | 177 | 133 | 44 | 73 | 61 | 12 | 1542 | 1303 | 239 |
| TUMAKURU | 141 | 137 | 4 | 105 | 80 | 25 | 127 | 64 | 63 | 110 | 65 | 45 | 103 | 56 | 47 | 123 | 66 | 57 | 102 | 38 | 64 | 53 | 51 | 2 | 864 | 557 | 307 |
| TUMAKURU MADHUGIRI | 204 | 196 | 8 | 147 | 123 | 24 | 186 | 137 | 49 | 157 | 120 | 37 | 143 | 104 | 39 | 187 | 133 | 54 | 145 | 90 | 55 | 76 | 71 | 5 | 1245 | 974 | 271 |
| UDUPI | 194 | 187 | 7 | 121 | 117 | 4 | 174 | 125 | 49 | 126 | 105 | 21 | 121 | 70 | 51 | 139 | 103 | 36 | 116 | 95 | 21 | 62 | 40 | 22 | 1053 | 842 | 211 |
| UTTARA KANNADA | 121 | 116 | 5 | 86 | 83 | 3 | 106 | 100 | 6 | 87 | 74 | 13 | 76 | 75 | 1 | 107 | 103 | 4 | 82 | 75 | 7 | 31 | 30 | 1 | 696 | 656 | 40 |
| UTTARA KANNADA SIRSI | 66 | 62 | 4 | 53 | 40 | 13 | 61 | 23 | 38 | 52 | 19 | 33 | 47 | 28 | 19 | 65 | 20 | 45 | 52 | 23 | 29 | 20 | 14 | 6 | 416 | 229 | 187 |
| VIJAYANAGARA | 217 | 207 | 10 | 147 | 135 | 12 | 179 | 107 | 72 | 151 | 116 | 35 | 140 | 102 | 38 | 167 | 137 | 30 | 140 | 116 | 24 | 45 | 34 | 11 | 1186 | 954 | 232 |
| VIJAYAPURA | 265 | 260 | 5 | 183 | 151 | 32 | 225 | 148 | 77 | 187 | 170 | 17 | 163 | 132 | 31 | 218 | 176 | 42 | 174 | 145 | 29 | 84 | 73 | 11 | 1499 | 1255 | 244 |
| YADAGIRI | 270 | 166 | 104 | 166 | 69 | 97 | 229 | 107 | 122 | 177 | 67 | 110 | 152 | 65 | 87 | 206 | 104 | 102 | 159 | 75 | 84 | 76 | 48 | 28 | 1435 | 701 | 734 |
| GRAND TOTAL | 7647 | 7118 | 529 | 5443 | 4178 | 1265 | 6659 | 4285 | 2374 | 5597 | 3847 | 1750 | 5060 | 3532 | 1528 | 6453 | 4194 | 2259 | 5220 | 3433 | 1787 | 2327 | 2023 | 304 | 44406 | 32610 | 11796 |

ಉಪನಿರ್ದೇಶಕರು (ಪ್ರೌಢ)

ಅನುಬಂಧ - 02

| District Wise Zero Enrolment of GHPS | |
|---|---|
| **District Name** | **No. Of Schools in District** |
| BELAGAVI | 7 |
| BENGALURU RURAL | 20 |
| BENGALURU U NORTH | 2 |
| BENGALURU U SOUTH | 4 |
| BIDAR | 18 |
| CHAMARAJANAGARA | 10 |
| CHIKKABALLAPURA | 14 |
| CHIKKAMANGALURU | 27 |
| CHITRADURGA | 10 |
| DAVANAGERE | 1 |
| DHARWAD | 1 |
| GADAG | 2 |
| HASSAN | 93 |
| KALBURGI | 35 |
| KODAGU | 2 |
| KOLAR | 39 |
| KOPPAL | 14 |
| MANDYA | 42 |
| MYSURU | 9 |
| RAICHUR | 4 |
| RAMANAGARA | 1 |
| SHIVAMOGGA | 6 |
| TUMAKURU | 112 |
| TUMAKURU MADHUGIRI | 18 |
| UDUPI | 11 |
| UTTARA KANNADA | 6 |
| UTTARA KANNADA SIRSI | 2 |
| VIJAYANAGARA | 4 |
| VIJAYAPURA | 5 |
| YADAGIRI | 2 |
| **Grand Total** | **521** |

13/12